ಹೊರಸೂಸುತ್ತಿತ್ತು. ಇಲ್ಲಿ ಅದೇ ಹಾಡು, ಅದೇ ಸ್ವರಗಳು. ಆದರೆ, ಆ ವೇದನೆ ಮರೆಯಾಗಿತ್ತು.

ಈ ಎರಡೂ ಹಾಡುಗಳ ಸ್ವರಕಂಪನಗಳ ಗ್ರಾಫ್ ತೆಗೆದು ತುಲನೆ ಮಾಡಿದ್ದರೆ ಎರಡೂ ಒಂದೇ ರೀತಿಯದ್ದಾಗಿರುತ್ತಿದ್ದವು. ಆದರೆ, ಶುಭಂಕರನಿಗೆ ಮಾತ್ರ ಆ ವ್ಯತ್ಯಾಸ ಗೊತ್ತಾಗಿತ್ತು. ಹಾಡನ್ನು ಅರ್ಥಮಾಡಿಕೊಂಡು ಕೇಳುವ ಯಾರಿಗೂ ಈ ವ್ಯತ್ಯಾಸ ಗೊತ್ತಾಗಬಹುದಿತ್ತು.

ಹಾಡು ಮುಗಿಯುವ ತನಕ ಇಬ್ಬರೂ ಕೂತಿದ್ದು ಮಿತಾಲಿಗೆ 'ತುಂಬಾ ಚೆನ್ನಾಗಿ ಹಾಡಿದೆ' ಎಂದು ಹೇಳಿ ಹೊರಟರು.

'ನಮ್ಮ ಪ್ರಯೋಗ ವಿಜ್ಞಾನದ ದೃಷ್ಟಿಯಿಂದ ಯಶಸ್ವಿಯಾಗಿದ್ದರೂ ಹಾಡಿನಲ್ಲಾಗಿರುವ ವ್ಯತ್ಯಾಸ ಮಾತ್ರ ಸ್ಪಷ್ಟವಾಗಿದೆ' ಶುಭಂಕರ ನಿರಾಸೆಯಿಂದೆಂದ.

'ನೀನು ಹೇಳುವುದು ನಿಜ ಶುಭಂಕರ್, ವಿಜ್ಞಾನದ ದೃಷ್ಟಿಯಿಂದ ನೋಡಿದರೆ ಹಾಡು ಗಂಟಲಿನಿಂದಲೇ ಹೊರಬರುತ್ತದೆ. ಶ್ವಾಸಕೋಶದಲ್ಲಿರುವ ಗಾಳಿ ಹಾಗೂ ಉಸಿರಾಟವನ್ನು ನಿಯಂತ್ರಿಸಿ ಗಾಯಕನು ಹೆಚ್ಚು ಕಡಿಮೆ ಒತ್ತಡವನ್ನು ಗಂಟಲಿಗೆ ಕೊಡುತ್ತಾನೆ. ಹಾಗಾಗಿ ಅಲ್ಲಿರುವ ಸ್ವರಯಂತ್ರದ ತಂತುಗಳು ಕಂಪಿಸುತ್ತವೆ. ಅವುಗಳ ವಿಶಿಷ್ಟ ಕಂಪನದಿಂದ ಶಬ್ದ ಹಾಗೂ ಸ್ವರಗಳುಂಟಾಗಿ ಬಾಯಿಯಿಂದ ಹೊರಬರುತ್ತವೆ. ಹಲ್ಲು, ನಾಲಿಗೆ ಹಾಗೂ ತುಟಿಗಳು ಆ ಶಬ್ದೋಚ್ಚಾರಕ್ಕೆ ಬೇರೆ ಬೇರೆ ಆಯಾಮ ಕೊಟ್ಟು ಪೂರ್ಣತ್ವಕ್ಕೆ ಕರೆದೊಯ್ಯುತ್ತವೆ. ಪರಿಣಾಮವಾಗಿ ಆ ಕಂಪನಕ್ಕೆ ಸ್ವರ, ಲಯ, ತಾಳ ಹಾಗೂ ಶಬ್ದೋಚ್ಚಾರಗಳ ಮೆರಗು ಸಿಗುತ್ತದೆ. ಇವೆಲ್ಲವೂ ಒಟ್ಟಿಗೆ ಹಾಡಾಗಿ ಬಾಯಿಯಿಂದ ಹೊರಬರುತ್ತದೆ. ಹಾಡೊಂದು ಜನರ ಮನಮುಟ್ಟಲು ಇವಿಷ್ಟೆ ಸಾಲದು, ಆ ಹಾಡಿನಲ್ಲಿ ಹೃದಯದ ಭಾವನೆ ಇಳಿಸಬೇಕು. ಭಾವನೆಗಳು ಬದಲಾದಂತೆ ಮುಖಚರ್ಯೆ ಬದಲಾಗಬೇಕು. ನಮ್ಮ ಇಡೀ ಶರೀರ ಆ ನಾದಬ್ರಹ್ಮದೊಂದಿಗೆ ಒಂದಾಗಬೇಕು. ಆಗಲೇ ಆ ಹಾಡು ಪರಿಪೂರ್ಣವಾಗುವುದು.'

'ಸಾತ್ವಿಕ್ ನಿನ್ನ ಮಾತು ನಿಜ, ಒಬ್ಬ ಗಾಯಕ ಮತ್ತೊಬ್ಬ ಗಾಯಕನಿಗಿಂತ ಭಿನ್ನ. ಹಾಡು ಕಲಿಯಲು ಹತ್ತತ್ತು ಗಂಟೆ ಮಾಡಿದ ಅಭ್ಯಾಸ, ಪರಿಶ್ರಮ, ಆ ಹಾಡಿನ ಬಗ್ಗೆಯಿರುವ ಬದ್ಧತೆ, ಹಾಡಿಗಾಗಿ ಬದುಕನ್ನೇ ಮುಡಿಪಾಗಿಡುವ ಪ್ರವೃತ್ತಿ ಇವೆಲ್ಲ ಆ ಹಾಡಿನಲ್ಲಿ ಕಾಣುತ್ತದೆ. ಅಷ್ಟೇ ಅಲ್ಲ ಚಿಕ್ಕಂದಿನಿಂದ ಆ ಗಾಯಕನ ಮೇಲಾಗಿರುವ ಸಂಸ್ಕಾರ, ಆತ ಪಟ್ಟ ಕಷ್ಟ, ದೇವರ ಜೊತೆಯಿರುವ ಆತನ ಭಾವನಾತ್ಮಕ ಬಂಧನ ಇವೆಲ್ಲವೂ ಆತನ ಬಾಯಿಯಿಂದ ಹೊರಹೊಮ್ಮುವ ಸ್ವರಗಳಾಗುತ್ತವೆ.'

'ಸ್ವರಯಂತ್ರಗಳು ಹಾಡನ್ನು ಹಾಡುವುದಿಲ್ಲ, ಹಾಡು ಮೆದುಳಿನಿಂದ ಹಾಡಲ್ಪಡುತ್ತದೆ. ನಿನ್ನ ಮಗಳು ಮೀತಾನ ಸ್ವರಯಂತ್ರದಿಂದ ಹಾಡಿದರೂ ಅದರ ಹಿಂದಿನ ಮೆದುಳು ಮಾತ್ರ ಮಿತಾಲಿಯದ್ದೆ. ಮೀತಾ ಹಾಡುವಾಗ ಅವಳು ಕಂಡದ್ದು, ಕೇಳಿದ್ದು, ಉಂಡದ್ದೆಲ್ಲ ಅವಳ ಹಾಡಿನಲ್ಲಿ ಇಳಿಯುತ್ತಿತ್ತು. ತುಟಿಗಳಿಂದ ಹಾಡು ಹೊರಬರುವಾಗ ಇವೆಲ್ಲವೂ ಅವಳ ಸ್ವರಕ್ಕೆ ಜೊತೆಯಾಗುತ್ತಿದ್ದವು. ಚಿಕ್ಕಂದಿನಿಂದ ಮೀತಾ ಬಹಳ ಕಷ್ಟಪಟ್ಟಿದ್ದಾಳೆ, ಸಂಗೀತಕ್ಕಾಗಿ ಆಕೆ ತನ್ನ ಇಡೀ ಬದುಕನ್ನೇ ಮುಡಿಪಾಗಿಟ್ಟಿದ್ದರಿಂದಲೇ ಸಂಗೀತ ಅವಳ ರೋಮರೋಮಗಳಲ್ಲಿತ್ತು.'

'ನಿಜ ಸಾತ್ವಿಕ್, ಇಂತಹ ಸ್ವರಯಂತ್ರಗಳನ್ನು ಅಳವಡಿಸಿ ಯಾರೂ ಮೀತಾ ಲೋಲಗೆಕರ ಆಗಲು ಸಾಧ್ಯವಿಲ್ಲ. ಸ್ವರಯಂತ್ರ ಒಂದು ಮಾಧ್ಯಮವಷ್ಟೆ, ನಿಜವಾದ ಸಂಗೀತ ಮೆದುಳಲ್ಲಿ ಜನಿಸಿ ಹೃದಯದಲ್ಲಿ ಬೆಳೆದು ತುಟಿಯಿಂದ ಹೊರಹೊಮ್ಮುತ್ತದೆ. ಹಾರ್ಮೋನಿಯಮ್, ತಬಲ ಹಾಗೇ